# ಕನ್ನಡಕ್ಕೆ 2 ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ

**ಬೆಂಗಳೂರು:** ಕನ್ನಡದ ಎರಡು ಕೃತಿಗಳಿಗೆ ರಾಷ್ಟ್ರ ಮಟ್ಟದಲ್ಲಿ ಮನ್ನಣೆ ದೊರೆತಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ 2025ನೇ ಸಾಲಿನ 'ಯುವ ಪುರಸ್ಕಾರ'ಕ್ಕೆ ಆರ್.ದಿಲೀಪ್ ಕುಮಾರ್ ಅವರ ವಿಮರ್ಶಾ ಸಂಕಲನ 'ಪಚ್ಚೆಯ ಜಗುಲಿ' ಆಯ್ಕೆಯಾಗಿದೆ. ಇದೇ ವೇಳೆ, ಬಳ್ಳಾರಿ ತಾಲೂಕಿನ ಕೆ.ಶಿವಲಿಂಗಪ್ಪ ಹಂದಿಹಾಳು ಅವರ 'ನೋಟ್‌ಬುಕ್' ಸಣ್ಣಕಥೆಗಳ ಸಂಕಲನವು ಕೇಂದ್ರ ಸಾಹಿತ್ಯ ಅಕಾಡೆಮಿಯ 2025ನೇ ಸಾಲಿನ 'ಬಾಲ ಸಾಹಿತ್ಯ ಪುರಸ್ಕಾರ'ಕ್ಕೆ ಭಾಜನವಾಗಿದೆ.

ಪ್ರಶಸ್ತಿಯು 50 ಸಾವಿರ ರೂ. ನಗದು ಹಾಗೂ ಫಲಕ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಅಕಾಡೆಮಿ ಪ್ರಕಟಣೆ ತಿಳಿಸಿದೆ.


ಆರ್.ದಿಲೀಪ್ ಕುಮಾರ್


ಕೆ.ಶಿವಲಿಂಗಪ್ಪ ಹಂದಿಹಾಳು

ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಚಾಮರಾಜನಗರ ಜಿಲ್ಲೆಯ ದಿಲೀಪ್‌ಕುಮಾರ್ ಉಪನ್ಯಾಸಕರಾಗಿಯೂ ಕೆಲಸ ಮಾಡಿದ್ದಾರೆ. ಅವರು 'ಹಾರುವ ಹಂಸೆ' ಎಂಬ ಕವನ ಸಂಕಲನವನ್ನೂ ಪ್ರಕಟಿಸಿದ್ದಾರೆ. ಅವರ ಹಲವು ಲೇಖನಗಳು ಹಾಗೂ ಕವನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಯುವ ಪುರಸ್ಕಾರಕ್ಕೆ ಕನ್ನಡದ ಲೇಖಕರಾದ ಟಿ.ಪಿ. ಅಶೋಕ, ವಿಕ್ರಂ ವಿಸಾಜಿ ಹಾಗೂ ಜಿ.ಎಂ. ಹೆಗಡೆ ತೀರ್ಪುಗಾರರಾಗಿದ್ದರು.

ಬಾಲ ಸಾಹಿತ್ಯ ಪುರಸ್ಕಾರಕ್ಕೆ ಕನ್ನಡದ ಲೇಖಕರಾದ ಡಾ. ಬಸು ಬೇವಿನಗಿಡದ, ಡಾ. ಬೇಲೂರು ರಘುನಂದನ್ ಹಾಗೂ ಎಚ್. ಶಶಿಕಲಾ ಅವರು ತೀರ್ಪುಗಾರರಾಗಿದ್ದರು.